

## ಗುಣಮುಖರಿಗೆ 'ಸಪೋರ್ಟಿವ್ ಕೇರ್'

ಕ್ಯಾನ್ಸರ್‌ನಿಂದ ಗುಣಮುಖರಾದ ಜನರಿಗೆ ಆರೋಗ್ಯದ ಜೊತೆಗೆ ಮಾನಸಿಕ ನೆಮ್ಮದಿ ಬೇಕು. ರೋಗ ನಿವಾರಣೆಯಾದರೂ ಆತಂಕ ಮರೆಮಾಚದೇ ಇರುವವರಿಗಾಗಿ ಸಾಂತ್ವನ, ಸಮಾಧಾನ ನೀಡುವ 'ಸಪೋರ್ಟಿವ್ ಕೇರ್' ಇಂದಿನ ದಿನಗಳಲ್ಲಿ ಬಹಳ ಅಗತ್ಯ. ಬೆಂಗಳೂರಿನ ಜಯನಗರದಲ್ಲಿರುವ 'ಪ್ರಮೇಯ ಹೆಲ್ತ್‌ಕೇರ್' ಕ್ಯಾನ್ಸರ್‌ನಿಂದ ಗುಣಮುಖರಾದವರಿಗೆ ಮಾನಸಿಕ ಬೆಂಬಲ ಒದಗಿಸಿಕೊಡುತ್ತದೆ.

'ಕ್ಯಾನ್ಸರ್ ಬಂದವರಿಗೆ ಔಷಧಿ ಸೇವಿಸಿ ಸೇವಿಸಿ ತೂಕ ಹೆಚ್ಚುವ ಅಥವಾ ಕೆಲ ಸಂದರ್ಭಗಳಲ್ಲಿ ತೂಕ ಇಳಿಕೆಯಾಗುವ ಸಂಭವ ಇರುತ್ತದೆ. ಇಂಥವರಿಗೆ ಪೌಷ್ಟಿಕ ಆಹಾರ ಮತ್ತು ಅದನ್ನು ಸೇವಿಸುವ ಪ್ರಮಾಣದ ಬಗ್ಗೆ ತಿಳಿದಿರುವುದಿಲ್ಲ. ಸ್ತನ ಕ್ಯಾನ್ಸರ್, ಕೋಲನ್ ಕ್ಯಾನ್ಸರ್ ಮುಂತಾದವು ಮರುಕಳಿಸುವ ಅಪಾಯವೂ ಇದೆ. ಇಂಥವರಿಗೆ ಸಂಪೂರ್ಣ ಮಾಹಿತಿ ನೀಡಿ ಕಾಳಜಿ ವಹಿಸಬೇಕಾಗುತ್ತದೆ' ಎಂದು ಹೇಳುತ್ತಾರೆ 'ಪ್ರಮೇಯ'ದಲ್ಲಿ ಸಲಹೆಗಾರರಾಗಿರುವ ದೇಶದ ಮೊದಲ ಮಹಿಳಾ 'ಮೆಡಿಕಲ್ ಆಂಕಾಲಜಿಸ್ಟ್' ಡಾ.ಪಿ.ಪಿ. ಬಾಪ್ಸಿ.



(ಸರ್ವೈಕಲ್) ಕ್ಯಾನ್ಸರ್, ಇನ್ನೂ ಮುಂದುವರಿದರೆ ದೊಡ್ಡಕರುಳಿಗೆ ಅಂಟುವ ಕೋಲನ್ ಕ್ಯಾನ್ಸರ್, ಸದ್ದಿಲ್ಲದೆ ಆವರಿಸುವ ಪ್ರಾಸ್ಟೇಟ್ ಕ್ಯಾನ್ಸರ್, ಚರ್ಮ ಕ್ಯಾನ್ಸರ್... ಇಷ್ಟೇ ಏಕೆ, ಇಡೀ ದೇಹವನ್ನು ಇಂಚಿಂಚೇ ಹೊಂಚು ಹಾಕಿ ನುಂಗುವ ರಕ್ತದ ಕ್ಯಾನ್ಸರ್... ಅಬ್ಬಬ್ಬಾ ಒಂದೇ ಎರಡೇ...?

### ಔಷಧ ವಿಜ್ಞಾನದಲ್ಲಿ ಕ್ರಾಂತಿ

ಒಂದು ಕಾಲವಿತ್ತು. ಕ್ಯಾನ್ಸರ್ ಎಂಬ ಶಬ್ದ ಕೇಳಿದರೆ ಜನ ಥರಥರ ನಡುಗುತ್ತಿದ್ದರು. ಪರೀಕ್ಷೆ ಮಾಡಿಸಿ ದೃಢವಾದರಂತೂ ರೋಗಿಯ ಜತೆಗೆ ಮನೆಮಂದಿಯೂ ಆಕಾಶವೇ ಕಳಚಿಬಿದ್ದಂತೆ ವ್ಯಥೆಪಡುತ್ತಿದ್ದರು. ರೋಗ ಅಮರಿಕೊಂಡಿರುವುದಕ್ಕಿಂತ ಹೆಚ್ಚಾಗಿ ಹೆದರಿಕೆಯೇ ಮೇಲ್ಪಂಕ್ತಿ ಹಾಕುತ್ತಿತ್ತು. ರೋಗದ ತೀವ್ರತೆಗಿಂತ ಹೆಚ್ಚಾಗಿ ಕಾಯಿಲೆಯ ಭಯಕ್ಕೇ ರೋಗಿ ಪಾತಾಳಕ್ಕಿಳಿಯುತ್ತಿದ್ದ. ವೈದ್ಯರಿಗೂ ಹೆಚ್ಚಿನ ಆಯ್ಕೆಗಳಿರಲಿಲ್ಲ. ರೋಗಿಯ ಅರಿವಿಗೆ ಬಾರದಂತೆ ಆತನ ಮನೆಯವರ ಬಳಿ 'ಇನ್ನು ಒಂದು ವರ್ಷವೋ ಅಥವಾ ಇನ್ನು ಆರು ತಿಂಗಳೋ ಅಷ್ಟೇ ಈತನ ಆಯುಷ್ಯ' ಎಂದು ಭವಿಷ್ಯ ನುಡಿಯುತ್ತಿದ್ದರು. ಮಾನಸಿಕ ಯಾತನೆ, ಮನದ ವೇದನೆ ತೀವ್ರಗೊಂಡು ನಿಂತರೂ ನೆಮ್ಮದಿಯಿಲ್ಲ, ಕೂತರೂ ಸುಖವಿಲ್ಲ, ಮಲಗಿದರೂ ನಿದ್ದೆಯಿಲ್ಲ, ಒರಗಿ ಕೂತರೂ ಸೊರಗಿ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು ಅಂದು.

ಈಗ ಕ್ಯಾನ್ಸರ್ ಪ್ರಾಣಾಂತಿಕವಲ್ಲ. ಸಕಾಲದಲ್ಲಿ ಸರಿಯಾದ ಉಪಚಾರ ದೊರೆತರೆ ಕ್ಯಾನ್ಸರ್‌ಗೆ ಕ್ಯಾರೆ ಅನ್ನಬೇಕಾಗಿಲ್ಲ ಎಂಬಷ್ಟು ಔಷಧ ವಿಜ್ಞಾನ ಮುಂದುವರಿದಿದೆ. ಎಲ್ಲ ರೀತಿಯ ಕ್ಯಾನ್ಸರ್‌ಗಳನ್ನೂ ಸಂಪೂರ್ಣವಾಗಿ ಗುಣಪಡಿಸುವ; ರೋಗಿ, ನಿರೋಗಿ ಎನಿಸಿಕೊಂಡು ನಿರಾಳ ಜೀವನ ನಡೆಸುವಷ್ಟು ವೈದ್ಯ ವಿಜ್ಞಾನ, ಔಷಧಿ, ಚಿಕಿತ್ಸೆ ಇಂದು ಲಭ್ಯವಿದೆ. ಆದರೂ ಇದರ ಬಗ್ಗೆ ಹೆಚ್ಚಿನ ಕಾಳಜಿ, ಜಾಗೃತಿ, ಅರಿವು ಬೇಕೇ ಬೇಕು. ಈ ನಿಟ್ಟಿನಲ್ಲಿ ಫೆಬ್ರುವರಿ 4ನ್ನು ಪ್ರತೀ ವರ್ಷ 'ವಿಶ್ವ ಕ್ಯಾನ್ಸರ್ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಈ ವರ್ಷ 'ಐ ಆ್ಯಮ್ ಅಂಡ್ ಐ ವಿಲ್' (**I am and I will**) ಎಂಬ ಧ್ಯೇಯವಾಕ್ಯದೊಂದಿಗೆ ಈ ದಿನವನ್ನು ಆಚರಿಸಲಾಗುತ್ತದೆ.

ಕ್ಯಾನ್ಸರ್ ಎಂಬ ಪದಕ್ಕೆ ಕನ್ನಡದಲ್ಲಿ 'ಅರ್ಬುದ ರೋಗ' ಎಂದು ಹೆಸರು. ಅರ್ಬುದ ಎಂದರೆ 'ಏಡಿ'. ಈ ಪ್ರಾಣಿ ತನ್ನ ಕಬಂಧ ಬಾಹುಗಳಲ್ಲಿ ಹುಳಹುಪ್ಪಟೆ ಮುಂತಾದ ಆಹಾರವನ್ನು ಒಮ್ಮೆ ಹಿಡಿದುಕೊಂಡರಾಯಿತು, ಸುಲಭದ ಪಟ್ಟಿಗೆ ತನ್ನ ಬಾಹುಗಳ ಹಿಡಿತವನ್ನು ಸಡಿಲಿಸುವುದಿಲ್ಲ. ಇದೇ ಕಾರಣಕ್ಕೆ ಕ್ಯಾನ್ಸರ್‌ಗೆ 'ಅರ್ಬುದ' ಎಂಬ ಹೆಸರು ಬಂದಿದೆ ಎನ್ನುವುದು ತಜ್ಞರ ವಿಶ್ಲೇಷಣೆ.

ಇಂದಿನ ಬದಲಾದ ಜೀವನಶೈಲಿಯಿಂದಾಗಿ ಕ್ಯಾನ್ಸರ್ ಕೂಡ ಹೆಚ್ಚುತ್ತಿದೆ. ಜಗತ್ತಿನಲ್ಲಿ ಪ್ರತಿವರ್ಷ